# ಮೈಸೂರು ವಾರಿಯರ್ಸ್ ತಂಡ ಪ್ರಕಟ

ಮೈಸೂರು, ಆ. ೧೯- ಬರುವ ೨೮ರಿಂದ ಸೆ. ೧೪ರವರೆಗೆ ನಡೆಯಲಿರುವ ಕರ್ನಾಟಕ ಪ್ರೀಮಿಯರ್ ಲೀಗ್‌ನ ೩ನೇ ಆವೃತ್ತಿಯ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡವನ್ನು ಪ್ರಕಟಿಸಲಾಯಿತು.

ಸೈಕಲ್ ಬ್ರ್ಯಾಂಡ್ ಅಗರಬತ್ತಿ ಸಂಸ್ಥೆಯು ಮೈಸೂರು ವಾರಿಯರ್ಸ್ ತಂಡದ ಮಾಲೀಕರಾಗಿದ್ದು, ಸಂಸ್ಥೆಯ ಮುಖ್ಯಸ್ಥ ಗುರು ತಮ್ಮ ತಂಡದ ಆಟಗಾರರ ಹೆಸರನ್ನು ಪ್ರಕಟಿಸಿದರು.

ಅಮಿತ್ ವರ್ಮ, ಮನೀಷ್ ಪಾಂಡೆ, ಶಿಶಿರ್ ಭವಾನೆ, ಕೀರ್ತಿ ಪವನ್, ಸುಚಿತ್, ಸಾದಿಕ್ ಕಿರ್ಮಾನಿ, ಆದಿತ್ಯ ಸಾಗರ್, ಯರೇಗೌಡ, ಎಂ.ಬಿ. ದರ್ಶನ್, ರಾಜು ಭಟ್ಕಳ್, ಮಂಜುನಾಥ್, ಮಂಜೇಶ್ ರೆಡ್ಡಿ, ಅಬ್ದುಲ್ ಮಜೀದ್, ವೈಶಾಖ್ ವಿಜಯಕುಮಾರ್, ಸೋಮಶೇಖರ್, ಶಶಿಶೇಖರ್ ಮತ್ತು ಸುನಿಲ್‌ಕುಮಾರ್ ಆಟಗಾರರಾಗಿದ್ದಾರೆ.

ನಾಲ್ವರು ಬೌಲರ್‌ಗಳು, ಐವರು ಬ್ಯಾಟ್ಸ್‌ಮನ್‌ಗಳು ಮತ್ತು ೮ ಮಂದಿ ಆಲ್‌ರೌಂಡರ್‌ಗಳಿರುವ ಈ ತಂಡದಲ್ಲಿ ತರಬೇತಿದಾರರು, ವೈದ್ಯರು ಕೂಡ ಇದ್ದು, ಮುಂದಿನ ದಿನಗಳಲ್ಲಿ ಭಾರತೀಯ ಕ್ರಿಕೆಟ್‌ಗೆ ಹೆಚ್ಚಿನ ಕೊಡುಗೆ ನೀಡಬೇಕು ಎಂಬ ಆಶಯದಿಂದ ತಂಡ ಕಟ್ಟುತ್ತಿರುವುದಾಗಿ ಗುರು ಹೇಳಿಕೊಂಡರು.